# ಬಟ್ಟೆ ಅಂಗಡಿಯಲ್ಲಿ ನೇಯ್ದ ಬದುಕು

***ಸಾರಾಂಶ:*** *ಸ್ವಸಹಾಯ ಸಂಘದ ಸಾಲವನ್ನು ಕುಟುಂಬದ ಅಭಿವೃದ್ಧಿ ಕೆಲಸಗಳಿಗೆ ಹೇಗೆ ಬಳಸಿಕೊಳ್ಳಬೇಕೆಂಬುದಕ್ಕೆ ಉತ್ತಮ ನಿದರ್ಶನ ಈ ಭೂರಹಿತ ಹೆಣ್ಣುಮಗಳು. ಮನೆಯಲ್ಲಿ ವ್ಯಾಪಾರ ಆರಂಭಿಸಿ, ನಂತರ ಪುಟ್ಟ ಅಂಗಡಿ ತೆಗೆದು ವ್ಯಾಪಾರವನ್ನು ವಿಸ್ತರಿಸಿ ಮಕ್ಕಳಿಗೆ ಒಳ್ಳೆಯ ವಿದ್ಯೆ, ಸುಸಜ್ಜಿತ ಮನೆ ನಿರ್ಮಾಣ ಮಾಡಿಕೊಂಡು ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ.*

ಕೇವಲ 5ನೇ ತರಗತಿ ಓದಿರುವ ಈರವ್ವನ ತವರು ಹಾನಗಲ್ ತಾಲ್ಲೂಕಿನ ಬಾಳೆಹಳ್ಳಿ. ಮದುವೆಯಾಗಿ ಇಲ್ಲಿಗೆ ಬಂದು 20 ವರ್ಷ ಆಯಿತು. ಗಂಡ ಮಂಜುನಾಥ್ ಭೂರಹಿತರು. ಬಸ್ ಡ್ರೈವರ್ ಆಗಿ ಕೆಲಸ ಮಾಡುತ್ತಾರೆ. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು. ಪೂಜಾ ಮತ್ತು ಪವಿತ್ರ. ಇವರ ಜೊತೆಗೆ ಹರೀಶ್ ಎಂಬ ಹುಡುಗನನ್ನು ಸಾಕುಮಗನಾಗಿ ಸಲಹುತ್ತಿದ್ದಾರೆ. ದೊಡ್ಡ ಮಗಳು ಪೂಜಾ ಪ್ಯಾರಾ ಮೆಡಿಕಲ್ ಓದು ಮುಗಿಸಿದ್ದು ಪ್ರಸ್ತುತ ಕೆಲಸ ಮಾಡುತ್ತಿದ್ದಾರೆ. ಪವಿತ್ರ ಮೊದಲನೇ ಪಿ.ಯು.ಸಿ ಹಾಗೂ ಮಗ 10ನೇ ತರಗತಿ ಓದುತ್ತಿದ್ದಾರೆ.



ಮದುವೆಯಾದ ಮೊದಲ 10 ವರ್ಷ ಈರವ್ವ ಕೇವಲ ಮನೆ ಕೆಲಸಕ್ಕಷ್ಟೇ ಸೀಮಿತರಾಗಿದ್ದರು. ಮಕ್ಕಳ ಪಾಲನೆ, ಅಡುಗೆ ಮಾಡುವುದು ಇಷ್ಟೇ. ಆದರೆ ಗಂಡ ಚಾಲಕರಾಗಿ ಹೋದರೆ ವಾರಗಟ್ಟಲೆ ಮನೆಗೆ ಬರುತ್ತಿರಲಿಲ್ಲ. ಅಲ್ಲದೆ ಮಕ್ಕಳೂ ಸ್ವಲ್ಪ ದೊಡ್ಡವರಾಗಿ ಅವರ ಕೆಲಸ ಅವರು ಮಾಡಿಕೊಳ್ಳಲು ತೊಡಗಿದಾಗ ಈರವ್ವನಿಗೆ ತುಂಬಾ ಬಿಡುವು ದೊರೆಯಿತು.

**ಸ್ವಸಹಾಯ ಸಂಘದ ಸಾಂಗತ್ಯ:** ಇದೇ ಸಮಯಕ್ಕೆ–ಅಂದರೆ 2013ರಲ್ಲಿ ಮನು ವಿಕಾಸ ಸಂಸ್ಥೆಯು ಇವರ ಪಾಳ ಗ್ರಾಮದಲ್ಲಿ ಮಹಿಳಾ ಸಂಘಟನೆ ಮಾಡುತ್ತಾ ಸಂಘಗಳನ್ನು ರಚಿಸುತ್ತಿತ್ತು. ಈರವ್ವನೂ ಸಹ 'ಕೃತಿ ಮನು ವಿಕಾಸ ಮಹಿಳಾ ಸ್ವಸಹಾಯ ಸಂಘ'ದ ಸದಸ್ಯರಾದರು. ಇವರು ಸಂಘದ ಸದಸ್ಯರಾಗಲು ಮುಖ್ಯ ಕಾರಣ ಏನಾದರೂ ಉದ್ಯೋಗ ಮಾಡಲು ಅವಕಾಶ ಸಿಗಬಹುದೇನೋ ಎಂಬುದಾಗಿತ್ತು. ಇವರ ಆಸೆ ಮಣ್ಣುಗೂಡಲಿಲ್ಲ. 2014ರಲ್ಲಿ ಮನು ವಿಕಾಸ ಸಂಸ್ಥೆಯು ನಬಾರ್ಡ್ ಮೂಲಕ ಇವರ ಸಂಘಕ್ಕೆ ಸಾಲ ದೊರಕಿಸಿತು. ಅದರಲ್ಲಿ ಈರವ್ವನಿಗೆ 29000 ರೂ. ದೊರೆಯಿತು. ಇದೇ ಇವರ ಆರಂಭಿಕ ಬಂಡವಾಳ. ಇದನ್ನು ಹೇಗೆ ಬಳಸಿಕೊಳ್ಳಬೇಕೆಂಬ ಗೊಂದಲದ ನಡುವೆಯೇ ಒಂದು ಪ್ರಯತ್ನ ಮಾಡೋಣ ಎಂದುಕೊಂಡು ಮನೆಯಲ್ಲೇ ಸೀರೆಗಳ ವ್ಯಾಪಾರ ಶುರು ಮಾಡಿದರು. ಹುಬ್ಬಳ್ಳಿಯಿಂದ ಸಗಟು ವ್ಯಾಪಾರಿಗಳ ಮೂಲಕ ಸೀರೆಗಳನ್ನು ತರಿಸಿ ಮಾರಾಟ ಮಾಡಲು ಆರಂಭಿಸಿದರು.

**ಕಿರು ಉದ್ದಿಮೆ:** ಅಚ್ಚರಿ ಎಂಬಂತೆ ಕೆಲವೇ ತಿಂಗಳಲ್ಲಿ ಇವರ ವ್ಯಾಪಾರ ಕುದುರಿಕೊಂಡಿತು. ಎಷ್ಟರಮಟ್ಟಿಗೆ ಎಂದರೆ ಮನೆಯಲ್ಲಿ ಸೀರೆ ಕೊಳ್ಳುವ ಜನರ ಗಿಜಿ–ಗಿಜಿಯಿಂದ ಮಕ್ಕಳಿಗೆ ತೊಂದರೆಯಾಗತೊಡಗಿತು. ಒಂದೇ ವರ್ಷದಲ್ಲಿ–ಅಂದರೆ 2016ರಲ್ಲಿ ಒಂದು ಅಂಗಡಿಯನ್ನು ಬಾಡಿಗೆ ಪಡೆದು ವಹಿವಾಟನ್ನು ಅಲ್ಲಿಗೆ ವರ್ಗಾಯಿಸಿದರು. ಅಂಗಡಿಗೆ 'ಶ್ರೀ ಮಂಜುನಾಥ ಗಾರ್ಮೆಂಟ್ಸ್' ಎಂಬ ಅಧಿಕೃತ ಹೆಸರನ್ನೂ ಇಟ್ಟರು. ಈ ಮೂಲಕ ಈರವ್ವ ಎಂಬ ಗೃಹಿಣಿ ಕಿರು ಉದ್ಯಮಿಯಾಗಿ ರೂಪುಗೊಂಡರು. ಪಾಳ ಗ್ರಾಮದ ಮಧ್ಯಭಾಗದಲ್ಲೇ ಇವರ ಅಂಗಡಿ ಇದ್ದು ಗ್ರಾಹಕರು ಸುಲಭವಾಗಿ ಬಂದು ಹೋಗಬಹುದಾಗಿದೆ.



ಮನು ವಿಕಾಸ ಸಂಸ್ಥೆಯಿಂದ 2018ರಲ್ಲಿ ಆವಂತಿ ಯೋಜನೆ ಮೂಲಕ ಮತ್ತೆ 25000 ರೂ. ಸಾಲ ದೊರೆಯಿತು. ಇದನ್ನು ಬಂಡವಾಳವಾಗಿ ಬಳಸಿಕೊಂಡು ಇವರು ಬಟ್ಟೆ ವ್ಯಾಪಾರದ ಜೊತೆಗೆ ಇನ್ನಿತರ ಫ್ಯಾನ್ಸಿ ಸರಕುಗಳಿಗೂ ವಿಸ್ತರಣೆ ಮಾಡಿದರು. ಹೀಗೆ ಅಂಗಡಿಯಲ್ಲಿ ದೊರೆಯುವ ವಸ್ತುಗಳ ವೈವಿಧ್ಯತೆ ಹೆಚ್ಚಾದ ನಂತರ ಇವರ ವ್ಯಾಪಾರ ದುಪ್ಪಟ್ಟಾಯಿತು. ಮೊದಲು ದಿನಕ್ಕೆ

1000–1500 ವ್ಯಾಪಾರ ನಡೆಯುತ್ತಿದ್ದು ಈಗ ದಿನಕ್ಕೆ ಸರಾಸರಿ 4000 ರೂ. ವ್ಯಾಪಾರವಾಗುತ್ತದೆ ಎಂಬುದು ಇವರ ಅನಿಸಿಕೆ. ಹಬ್ಬಗಳು ಹಾಗೂ ಗ್ರಾಮದ ಜಾತ್ರೆ ಸಮಯದಲ್ಲಿ ಇನ್ನೂ ಹೆಚ್ಚಿನ ವಹಿವಾಟು ನಡೆಸುತ್ತಾರೆ. 2020ನೇ ಇಸವಿಯಲ್ಲಿ ಕೆನರಾ ಬ್ಯಾಂಕ್ ಮೂಲಕ 50,000 ರೂ. ಸಾಲ ದೊರೆತಿತ್ತು ಈ ಮೊತ್ತವನ್ನೂ ಸಹ ಮಕ್ಕಳ ಓದು, ವ್ಯಾಪಾರ ವೃದ್ಧಿ ಇತ್ಯಾದಿಗಳಿಗೆ ಬಳಸಿಕೊಂಡಿದ್ದಾರೆ. ಸಾಲವನ್ನು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿ ವಿಶ್ವಾಸ ಉಳಿಸಿಕೊಂಡಿದ್ದಾರೆ.

ಈ ವ್ಯಾಪಾರದಲ್ಲಿ, ಅದರಲ್ಲಿಯೂ ಹೆಣ್ಣು ಮಗಳೊಬ್ಬಳು ವಹಿವಾಟು ನಡೆಸುವಾಗ ಮೋಸವಾಗುವುದಿಲ್ಲವೇ" ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ಕೆಲವೊಮ್ಮೆ ಸಗಟು ವ್ಯಾಪಾರಿಗಳು ಕಳಪೆ ಮಾಲು ಕೊಟ್ಟಿದ್ದೂ ಇದೆ, ಆದರೆ ನಾವು ಕೆಲವೇ ವ್ಯಾಪಾರಿಗಳಲ್ಲಿ ಖಾಯಂ ಆಗಿ ವಹಿವಾಟು ನಡೆಸುವುದರಿಂದ ಅಂತಹ ಸಂದರ್ಭಗಳು ಕಡಿಮೆ" ಎನ್ನುತ್ತಾರೆ. ಅಲ್ಲದೆ ಇವರು ನಡೆಸುವ ವ್ಯಾಪಾರದಲ್ಲಿ ಬೇಗ ಕೆಡುವ ವಸ್ತುಗಳು ಇಲ್ಲದಿರುವುದರಿಂದ ನಷ್ಟದ ಬಾಬ್ತು ಕಡಿಮೆ.



**ಅವಲಂಬನೆ ಇಲ್ಲ:** ಈ ಎಲ್ಲಾ ವಹಿವಾಟನ್ನೂ–ಅಂದರೆ ಸರಕುಗಳನ್ನು ತರುವುದು ಅಥವಾ ಪಾರ್ಸಲ್ ತರಿಸುವುದು, ಅದರ ಪಾವತಿ, ಅಂಗಡಿಯಲ್ಲಿ ನಿಂತು ವ್ಯಾಪಾರ ಮಾಡುವುದು, ಗ್ರಾಹಕರೊಂದಿಗೆ ಉತ್ತಮ ಒಡನಾಟ, ಹಣಕಾಸಿನ ಶಿಸ್ತು ಕಾಪಾಡುವುದು, ಅಂಗಡಿಯಲ್ಲಿ ಗ್ರಾಹಕರ ಕಣ್ಣಿಗೆ ಚೆಂದ ಕಾಣುವಂತೆ ಸರಕುಗಳನ್ನು ಪ್ರದರ್ಶಿಸುವುದು, ಸ್ವಚ್ಚತೆ ನಿರ್ವಹಿಸುವುದು–ಈ ಎಲ್ಲಾ ಜವಾಬ್ದಾರಿಗಳನ್ನೂ ಈರವ್ವ ಸಮಾಧಾನ ಚಿತ್ತದಿಂದ ಹಾಗೂ ನಗು–ನಗುತ್ತಲೇ ನಿರ್ವಹಿಸುತ್ತಾರೆ. ಇದೇ ಇವರ ಯಶಸ್ಸಿನ ಮೂಲಮಂತ್ರವೂ ಆಗಿದೆ. ಬೆಳಿಗ್ಗೆ 10 ಗಂಟೆಗೆ ಅಂಗಡಿ ತೆರೆದರೆ ರಾತ್ರಿ 7–8 ಗಂಟೆಯವರೆಗೂ ತೆರೆದಿರುತ್ತಾರೆ. ಅಷ್ಟೂ ಹೊತ್ತು ಈರವ್ವನೇ ನೋಡಿಕೊಳ್ಳುತ್ತಾರೆ. ವ್ಯಾಪಾರ ಹೆಚ್ಚಾಯಿತೆಂದು ಆಳುಗಳನ್ನು ಇಟ್ಟುಕೊಳ್ಳುವುದು, ಬೇರೆಯವರ ಮೇಲೆ ಅವಲಂಬನೆಯಾಗುವುದು ಇವರಿಗೆ ಇಷ್ಟವಿಲ್ಲ.

**ಮೇಲ್ಮುಖ ಚಲನೆ:** ಈ ವ್ಯಾಪಾರದಲ್ಲಿ ಸರಾಸರಿ ಶೇ 50ರಷ್ಟು ಲಾಭವಿದೆ ಎನ್ನುತ್ತಾರೆ ಈರವ್ವ. ಅಂದರೆ ಒಂದು ಸಾವಿರ ಬಂಡವಾಳ ಹಾಕಿದರೆ ಒಂದೂವರೆ ಸಾವಿರ ಆದಾಯ ಬರುತ್ತದೆ. ಇವರ ನೆನಪಿನ ಆಧಾರದಲ್ಲಿ ಕಳೆದ ಮೂರು ವರ್ಷಗಳ ಆದಾಯ ಮತ್ತು ವೆಚ್ಚವನ್ನು ನೋಡುವುದಾದರೆ; ವಾರ್ಷಿಕ ಸುಮಾರು 14 ಲಕ್ಷದಷ್ಟು ವ್ಯಾಪಾರ ನಡೆದಿದೆ. ಅದರಲ್ಲಿ

ಸರಕುಗಳಿಗೆ ಹಾಕಿದ ಬಂಡವಾಳ, ಅಂಗಡಿ ಬಾಡಿಗೆ, ಸಾಗಣೆ ವೆಚ್ಚ ಎಲ್ಲವನ್ನೂ ಕಳೆದು 7 ಲಕ್ಷ ರೂ. ನಿವ್ವಳ ಆದಾಯ ಇವರಿಗೆ ದೊರೆತಿದೆ. ವರ್ಷಕ್ಕೆ ಏಳು ಲಕ್ಷ ಆದಾಯ ಎಂದರೆ ಅದು ಒಬ್ಬ ಮೇಲು ಮಧ್ಯಮ ವರ್ಗದ ಕುಟುಂಬದ ಆದಾಯ.

ಅಂದರೆ 2002ನೇ ಇಸವಿಯಲ್ಲಿ –ಅಂದರೆ 20 ವರ್ಷಗಳ ಹಿಂದೆ– ಬಡತನ ರೇಖೆಗಿಂತ ಕೆಳಗಿದ್ದ ಈ ಕುಟುಂಬ ಇಂದು ಈರವ್ವನ ಚಾಕಚಕ್ಯತೆ, ಬಂಡವಾಳ ಹೂಡುವ ಧೈರ್ಯ, ಹಣಕಾಸಿನ ಶಿಸ್ತು ಇತ್ಯಾದಿಗಳಿಂದಾಗಿ ಗ್ರಾಮದಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮೇಲ್ಮುಖ ಚಲನೆಯಲ್ಲಿರುವುದು ಗಮನಾರ್ಹ ಸಂಗತಿ.

**ಹೊಸಾ ಮನೆ ಮತ್ತು ಮಗಳ ಮೆಡಿಕಲ್ ಓದು:** ಇವರ ವ್ಯಾಪಾರ ಶುರುವಾದ ನಂತರ ಬಾಡಿಗೆ ಮನೆಯಲ್ಲಿದ್ದವರು ಸ್ವಂತ ಮನೆ ಮಾಡಿಕೊಳ್ಳುವ ಯೋಚನೆ ಮಾಡಿ ಅದನ್ನು ಕಾರ್ಯಗತಗೊಳಿಸಿದ್ದು ವಿಶೇಷ ಸಾಧನೆ. 2019ರಲ್ಲಿ 8 ಲಕ್ಷ ಖರ್ಚು ಮಾಡಿ ಆರ್.ಸಿ.ಸಿ ಮನೆ ನಿರ್ಮಿಸಿಕೊಂಡರು. ಅಲ್ಲದೆ ದೊಡ್ಡ ಮಗಳ ಪ್ಯಾರಾ ಮೆಡಿಕಲ್ ಓದಿಗೆ ಮೂರು ವರ್ಷಕ್ಕೆ ಅಂದಾಜು 6,50,000 ರೂ. ವೆಚ್ಚವಾಗಿದೆ. **"**ನಮಗೆ ಕೈತುಂಬಾ ಆದಾಯ ಇದ್ದುದರಿಂದ ಈ ಸಾಹಸ ಮಾಡಲು ಸಾಧ್ಯವಾಯಿತು, ಇಲ್ಲವಾದರೆ ಓದಿಸಲು ಆಗುತ್ತಿರಲಿಲ್ಲ**"** ಎಂಬುದು ಗಂಡ ಮಂಜುನಾಥ್ ಅವರ ಅನಿಸಿಕೆ. ಮನೆಯ ಎಲ್ಲಾ ಸದಸ್ಯರು ಜೀವ ವಿಮೆ ಮಾಡಿಸಿಕೊಂಡಿದ್ದಾರೆ. ಮಕ್ಕಳಿಗೆ ಚಿನ್ನದ ಒಡವೆ ಖರೀದಿಸಿದ್ದಾರೆ.

ಮನು ವಿಕಾಸ ಸಂಸ್ಥೆಯು ಪಾಳ ಗ್ರಾಮದಲ್ಲಿರುವ ಎಲ್ಲಾ 25 ಸ್ವಸಹಾಯ ಸಂಘಗಳನ್ನು ಒಟ್ಟುಗೂಡಿಸಿ ಮಾರಿಕಾಂಬ ಒಕ್ಕೂಟವನ್ನು ರಚಿಸಿದ್ದು ಈರವ್ವ ಒಬ್ಬ ಸದಸ್ಯರಾಗಿದ್ದಾರೆ. ಆ ಮೂಲಕ ಒಕ್ಕೂಟಕ್ಕೂ ಸಹ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವುದು ವಿಶೇಷ.

**ಸಾಕು ಮಗ ಸಿಕ್ಕ ಕಥೆ:** ಗೋವಾದಲ್ಲಿ ಗಂಡ ಡ್ರೈವಿಂಗ್ ಕೆಲಸ ಮಾಡುವಾಗ ಅಲ್ಲಿನ ಕಾರ್ಮಿಕರ ಮಗುವೊಂದು ತಂದೆ ಇಲ್ಲದ ಅನಾಥವಾಗಿತ್ತು. ತಾಯಿಯೂ ಕೂಲಿ ಮಾಡಿಕೊಂಡು ಜೀವನ ನಡೆಸಲು ಕಷ್ಟ ಪಡುತ್ತಿದ್ದರು. ಆರು ವರ್ಷದ ಆ ಮಗುವನ್ನು ಮಂಜುನಾಥ್ ಅವರ ತಾಯಿಯ ಒಪ್ಪಿಗೆ ಮೇರೆಗೆ ಮನೆಗೆ ತಂದು ಸಾಕತೊಡಗಿದರು. ಈರವ್ವನೂ ಸಂತೋಷದಿಂದ ಇದಕ್ಕೆ ಒಪ್ಪಿದರು. ಆ ಮಗುವೇ ಹರೀಶ್. ಕೆಲ ವರ್ಷಗಳ ಹಿಂದೆ ಹರೀಶ್ ಅವರ ಹೆತ್ತ ತಾಯಿಯೂ ಸಹ ತೀರಿ ಹೋದರು.

ನಮ್ಮಲ್ಲಿ ಈರವ್ವನಂತೆ ತುಸುವೇ ಓದಿ ಗೃಹಿಣಿಯಾಗಿರುವ ಅನೇಕ ಮಹಿಳೆಯರಿದ್ದಾರೆ. ಅವರಿಗೆ ಸ್ವಲ್ಪ ಅವಕಾಶ ಸಿಕ್ಕರೂ ಸಾಕು ಯಶಸ್ವೀ ಉದ್ದಿಮೆದಾರರಾಗಿ ಬೆಳೆಯಬಲ್ಲರು ಎಂಬುದಕ್ಕೆ ಇದು ಒಂದು ಉತ್ತಮ ನಿದರ್ಶನ.

**ವಿಳಾಸ:**
ಈರವ್ವ ಮಂಜುನಾಥ್ ಗೊಂದೇರ
ಪಾಳ
ಮುಂಡಗೊಡ ತಾಲ್ಲೂಕು
ಉ.ಕ.ಜಿಲ್ಲೆ